ಸಿಬ್ಬಂದಿ ಇಲ್ಲದ ಕಾರಣದಿಂದ ಅಲ್ಲಿ ಮೇಲಿಂದ ಮೇಲೆ ಈ ರೀತಿ ಗಲಭೆಗಳಾಗುತ್ತವೆ. ಆದ್ದರಿಂದ ಇನ್ನೂ 5 ಪೋಲೀಸ್ ಸ್ಟೇಷನ್‌ಗಳನ್ನು ನಿರ್ಮಾಣ ಮಾಡಿದರೆ ಇಂತಹ ಗಲಭೆಗಳಾಗುವುದಕ್ಕೆ ಸಾಧ್ಯವಾಗುವುದಿಲ್ಲ. ಆದ್ದರಿಂದ ಸರ್ಕಾರದವರು ಈ ಬಗ್ಗೆ ಸೂಕ್ತ ಕ್ರಮ ಕೈಕೊಳ್ಳಬೇಕೆಂದು ಹೇಳುತ್ತೇನೆ. ಈಗ ಆದಂಥ ಅನಾಹುತವನ್ನು ಮಾನ್ಯ ಬೊಮ್ಮಾಯಿ ಅವರು ಕಣ್ಣಾರೆ ನೋಡಿದ್ದಾರೆ. ಅಷ್ಟೇ ಅಲ್ಲ, ಒಂದು ಶಾಂತಿ ಸಮಿತಿಯನ್ನು ರಚಿಸುವುದರ ಮೂಲಕ ಒಂದು ಒಳ್ಳೆಯ ವಾತಾವರಣವನ್ನು ನಿರ್ಮಾಣ ಮಾಡಿ ಬಂದಿದ್ದಾರೆ. ಮಾನ್ಯ ಮುಖ್ಯ ಮಂತ್ರಿಗಳು ಸಹ ಬರುವ ತಿಂಗಳು ಒಂದನೇ ತಾರೀಕಿನ ನಂತರ ಅಲ್ಲಿಗೆ ಬಂದು ಗಲಭೆಗೆ ಒಳಗಾದ ಜನರನ್ನು ಕಂಡು ಮಾತನಾಡಿಸುವುದರ ಮೂಲಕ ಅವರನ್ನು ಸಾಂತ್ವನಗೊಳಿಸಬೇಕು. ಈ ಗಲಭೆ ಬಗ್ಗೆ ಡಿ.ಐ.ಜಿ. ಮಟ್ಟದಲ್ಲಿ ವಿಚಾರಣೆ ಮಾಡಿಸುವುದಾಗಿ ಸರ್ಕಾರದವರು ಹೇಳಿದ್ದಾರೆ. ಆದರೆ ಅಲ್ಲಿನ ಜನರು ನ್ಯಾಯಾಂಗ ವಿಚಾರಣೆಯಾಗಬೇಕೆಂದು ಕೇಳುತ್ತಿದ್ದಾರೆ. ಆದ್ದರಿಂದ ನ್ಯಾಯಾಂಗ ವಿಚಾರಣೆ ನಡೆಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ರಮೇಶ್ ಜಿಗಜಿಣಗಿ (ಮಾನ್ಯ ಗೃಹ ಶಾಖೆಯ ರಾಜ್ಯ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ಹುಬ್ಬಳ್ಳಿಯಲ್ಲಿ ಹೋಳಿ ಹಬ್ಬದ ಸಂದರ್ಭದಲ್ಲಿ ನಡೆದಂಥ ಗಲಭೆಯು ಸರ್ಕಾರದ ಗಮನಕ್ಕೆ ಬಂದಿದೆ. ಈ ಒಂದು ಘಟನೆ ಯಾವುದೇ ಒಂದು ಜಾತಿ ಅಥವಾ ಕೋಮಿಗೆ ಸಂಬಂಧಪಟ್ಟಂತೆ ನಡೆದಿಲ್ಲವೆಂದು ಮಾನ್ಯ ಸದಸ್ಯರಿಗೆ ಸ್ಪಷ್ಟವಾಗಿ ಹೇಳುತ್ತೇನೆ. ಆದ್ದರಿಂದ ಈ ವಿಷಯವನ್ನು ಹೆಚ್ಚಿಗೆ ಇಲ್ಲಿ ಪ್ರಸ್ತಾಪ ಮಾಡುವುದು ಬೇಡ ಎಂದು ನಾನು ಅವರಲ್ಲಿ ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ. ಈ ಘಟನೆ ನಡೆದ ಮರು ದಿವಸ ಹೋಳಿ ಹಬ್ಬವನ್ನು ಜನರು ಆಚರಣೆ ಮಾಡಿದ್ದಾರೆ. ಇದು ನಡೆದ ನಂತರ ರಾತ್ರಿ ಸಮಯದಲ್ಲಿ ಎರಡು ಮೂರು ಮನೆಗಳಿಗೆ ಬೆಂಕಿ ಬಿದ್ದದ್ದು ನಿಜ. ಈ ಕಾರಣದಿಂದ ನಷ್ಟಕ್ಕೆ ಒಳಗಾದ ವರಿಗೆ ಪರಿಹಾರ ಕೊಡಬೇಕೆಂದು ಮಾನ್ಯ ಸದಸ್ಯರು ಕೇಳುತ್ತಿದ್ದಾರೆ. ಈ ಬಗ್ಗೆ ನಾನು ಈಗಾಗಲೇ ಮೇಲ್ಮನೆಯಲ್ಲಿ ಒಂದು ಹೇಳಿಕೆ ನೀಡಿದ್ದೇನೆ. ಈ ಘಟನೆಯಲ್ಲಿ ನೊಂದವರಿಗೆ ಪರಿಹಾರ ಕೊಡುವುದಕ್ಕೆ ಬರುತ್ತದೋ ಅಥವಾ ಇಲ್ಲವೋ ಎಂಬ ಬಗ್ಗೆ ಯೋಚನೆ ಮಾಡುತ್ತಿದ್ದೇವೆ. ಈಗ ಸದ್ಯದ ಪರಿಸ್ಥಿತಿಯಲ್ಲಿ ಅಲ್ಲಿ ವಾತಾವರಣ ಶಾಂತವಾಗಿದೆ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಎಂ. ಜಿ. ಜರತಾರಘರ್.—ಮಾನ್ಯ ಮಂತ್ರಿಗಳು ಇದು ಜಾತಿಯ ಗಲಭೆ ಅಲ್ಲವೆಂದು ಹೇಳಿಕೆ ಕೊಟ್ಟರು. ಆದರೆ ....

ಅಧ್ಯಕ್ಷರು.—334ನೇ ನಿಯಮದ ಪ್ರಕಾರ ಕ್ಲಾರಿಫಿಕೇಷನ್ ಕೇಳಲು ಅವಕಾಶವಿಲ್ಲ.

ವಿಷಯ : (iv) ಬಳ್ಳಾರಿ ತಾಲ್ಲೂಕ್ ಬೊಬ್ಬುಕುಂಟೆ ಗ್ರಾಮದಲ್ಲಿ ನೆರೆಹಾವಳಿಯಿಂದ ತೊಂದರೆಯಾಗುತ್ತಿರುವ ಬಗ್ಗೆ

ಶ್ರೀ ಎಂ. ರಾಮಪ್ಪ (ಬಳ್ಳಾರಿ).—ಬಳ್ಳಾರಿ ತಾಲ್ಲೂಕು, ಬಳ್ಳಾರಿ ಫಿರ್ಕಾಕ್ಕೆ ಸೇರಿದ ಮತ್ತು ಬಳ್ಳಾರಿ ಪಟ್ಟಣಕ್ಕೆ ಸಮೀಪದಲ್ಲಿರುವ ಬೊಬ್ಬುಕುಂಟೆ ಗ್ರಾಮ, ಬಹಳ ವರ್ಷಗಳಿಂದ ಗ್ರಾಮಕ್ಕೆ ಪಕ್ಕದಲ್ಲೇ ಹರಿಯುವ ಹಳ್ಳ ಮತ್ತು ಹೆಚ್.ಎಲ್.ಸಿ. ಕಾಲುವೆಯ ಹಾಗೂ ಉಪಕಾಲುವೆಯ ಹಾವಳಿಯಿಂದ ಜನರು ಬಹಳ ಕಷ್ಟಕ್ಕೆ ಈಡಾಗಿರುತ್ತಾರೆ. ನೆರೆ ಹಾವಳಿಯಿಂದಾಗಿ ಮನೆಗಳು, ದನಗಳು, ಹೊಲಗಳು ಮತ್ತು ಆಸ್ತಿಪಾಸ್ತಿಗಳು ಕಳೆದುಕೊಂಡು ಬಹಳ ಕಷ್ಟಕ್ಕೆ ಗುರಿಯಾಗಿದ್ದಾರೆ. ಗ್ರಾಮಸ್ಥರು ರೆವಿನ್ಯೂ ಮತ್ತು ಲೋಕೋಪಯೋಗಿ ಅಧಿಕಾರಿಗಳಿಗೆ ಎಷ್ಟೋ ಮನವಿ ಪತ್ರಗಳನ್ನು ಸಲ್ಲಿಸಿದರೂ ಕೂಡ ಇಲ್ಲಿಯವರೆವಿಗೂ ಯಾವ ವಿಧವಾದ ಪರಿಹಾರವೂ ಸಿಕ್ಕಿಲ್ಲ. ಗ್ರಾಮಸ್ಥರು ಎತ್ತರವಾದ ಪ್ರದೇಶಕ್ಕೆ ಅನಲು ಸರ್ವೆ ನಂಬರ್ 77 ಬಿ 1 ನಲ್ಲಿ ಹೊಸ ಗ್ರಾಮವನ್ನು ನಿರ್ಮಾಣ ಮಾಡಬೇಕೆಂದು ಮನವಿ ಮಾಡಿಕೊಂಡಿದ್ದಾರೆ. ಈ ವಿಷಯದ ಬಗ್ಗೆ ಘನ ಸರ್ಕಾರವು ತೀವ್ರ ಕಾರ್ಯಕ್ರಮ ತೆಗೆದುಕೊಳ್ಳಬೇಕು ಹಾಗೂ ಸದರಿ ಗ್ರಾಮಸ್ಥರಿಗೆ ಸಕಲ ನೆರವು ನೀಡಬೇಕೆಂದು ಮಾನ್ಯ ಮಂತ್ರಿಯವರಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಎಚ್. ಡಿ. ದೇವೇಗೌಡ (ಮಾನ್ಯ ಲೋಕೋಪಯೋಗಿ ಇಲಾಖೆಯ ಮಂತ್ರಿಗಳು).—ಈ ವಿಚಾರದ ಬಗ್ಗೆ ನಾನು ಮಾನ್ಯ ಸದಸ್ಯರನ್ನು ಕರೆಸಿ ಚರ್ಚೆ ಮಾಡಿದ ನಂತರ ಯಾವ ರೀತಿ ಪರಿಹಾರ ಒದಗಿಸಬೇಕು ಎಂಬುದನ್ನು ಯೋಚನೆ ಮಾಡುತ್ತೇನೆ.

ವಿಷಯ : (v) ಹೊನ್ನಾವರ ತಾಲ್ಲೂಕಿನಲ್ಲಿ ಪವರ್‌ಕಟ್ಟನ್ನು ಸರಿಯಾಗಿ ಮಾಡದೆ ಇರುವ ಬಗ್ಗೆ

ಶ್ರೀ ಆರ್. ಎನ್. ನಾಯಕ್ (ಬಟ್ಕಲ್).—ಮಾನ್ಯ ಅಧ್ಯಕ್ಷರೇ, ಹೊನ್ನಾವರ ತಾಲ್ಲೂಕಿಗೆ ಸೇರಿದ ಕೆ.ಇ.ಬಿ. ಕಛೇರಿಯಲ್ಲಿ ಶ್ರೀ ಶಣೈ ಎಂಬ ಹೆಸರಿನ ಅಸಿಸ್ಟೆಂಟ್ ಎಕ್ಸಿಕ್ಯೂಟಿವ್ ಇಂಜಿನಿಯರ್ ಅವರು ಪವರ್ ಕಟ್ ಬಗ್ಗೆ ಬೇರೆ ಕಡೆಗಳಿಗಿಂತ ಭಿನ್ನವಾದ ರೀತಿಯಲ್ಲಿ ನಡೆದುಕೊಳ್ಳುತ್ತಿದ್ದಾರೆ.